**ವ್ಯಾಖ್ಯಾನ**

# ಮುಸುರೆ ತೊಳೆಯಬೇಕು

1. **Ref.**: Haridasa Taranga Part-1, Published by M/s. Vyaasaanandadasa Pratishtaana, Bengaluru-98, First Edition 2014, page No. 95.
2. **Author:** Pandith Parashuram Betageri, Bengaluru.

**ಶ್ರೀ ಪುರಂದರ ದಾಸರ ಕೀರ್ತನೆಯ ಚಿಂತನೆ:**

ಇಪತ್ನಾಲ್ಕು ತತ್ವಗಳಿಂದ ಕೂಡಿರುವ ಈ ದೇಹದಿಂದಲೇ ನಾವು ಏನಾದರೂ ಸಾಧನೆಯನ್ನು ಮಾಡಬೇಕು. ಮಾನವ ಜನ್ಮದ ಈ ದೇಹಕ್ಕೆ ಎಲ್ಲಿಲ್ಲದ ಬೆಲೆ. ಅನೇಕ ಜನ್ಮಗಳಾನಂತರದಲ್ಲಿ ಈ ಮಾನವ ದೇಹವು ನಮಗೆ ದೊರಕಿದೆ ಎಂಬ ವಿಷಯವನ್ನು ನಾವು ಮರೆಯಬಾರದು. ಪಂಚ ಕರ್ಮೇಂದ್ರಿಯಗಳು ಮತ್ತು ಪಂಚ ಜ್ಞಾನೇಂದ್ರಿಯಗಳಿಂದ ಗ್ರಹಿಸಲ್ಪಟ್ಟ ಹಾಗೂ ಮಾಡಲ್ಪಟ್ಟ ಕಾರ್ಯಗಳನ್ನು ಮನಸ್ಸು ಗ್ರಹಿಸುತ್ತದೆ. ಮತ್ತು ಮುಂದೆ ಏನು ಮಾಡಬೇಕು ಎಂದು ಸೂಚನೆಯನ್ನೂ ಉಳಿದ ಇಂದ್ರಿಯಗಳಿಗೆ ಕೊಡುತ್ತದೆ. ಮನಸ್ಸು ದೃಢವಾಗಿದ್ದರೆ ಮಾತ್ರ ಜ್ಞಾನೇಂದ್ರಿಯಗಳಿಗೆ ಮತ್ತು ಕರ್ಮೇಂದ್ರಿಯಗಳಿಗೆ ಸರಿಯಾದ ಮಾರ್ಗದರ್ಶನ ದೊರೆಯುತ್ತದೆ ಮತ್ತು ದೇಹದಿಂದ ಸರಿಯಾದ ಕಾರ್ಯಗಳು ಮಾಡಲ್ಪಡುತ್ತವೆ. ಅಂತಃಕರಣವೆಂಬ ಮನಸ್ಸಿನ ಪ್ರಭಾವವು ಬಾಹ್ಯಕರಣಗಳಾದ ಕರ್ಮೇಂದ್ರಿಯಗಳಿಗೂ ಜ್ಞಾನೇಂದ್ರಿಯಗಳಿಗೂ ತಗುಲುತ್ತದೆ, ಅಲ್ಲದೆ ಭೌತಿಕ ದೇಹದ ಮೇಲೂ ಪರಿಣಾಮ ಬೀರುತ್ತದೆ. ಆದುದರಿಂದ ಮನಸ್ಸನ್ನು ಯಾವಾಗಲೂ ಶುಚಿಯಾಗಿ ಇಡಲು ಪ್ರಯತ್ನಿಸಬೇಕೆಂದು ದಾಸರಾಯರು ಸಾಧಕನಿಗೆ ಕಿವಿಮಾತು ಹೇಳುತ್ತಿದ್ದಾರೆ.

**ಮುಸುರೆ ತೊಳೆಯಬೇಕು ।**

**ಈ ಮನಸಿನ ಮುಸುರೆ ತೊಳೆಯಬೇಕು ॥ ಪ ॥**

ಆಹಾರವನ್ನು ಸಿದ್ಧಪಡಿಸಿ ಅದನ್ನು ಪರಮಾತ್ಮನಿಗೆ ನಿವೇದಿಸಿ ಸ್ವೀಕರಿಸುವುದು ಶಾಸ್ತ್ರ ಸಮ್ಮತವು. ಆಹಾರವನ್ನು ಸಿದ್ಧಪಡಿಸುವ ಪಾತ್ರೆಗಳಲ್ಲಿ, ಆಹಾರ ಪದಾರ್ಥಗಳಲ್ಲಿ ಹಾಗೂ ಸಿದ್ಧಪಡಿಸಿದ ಆಹಾರಗಳಲ್ಲಿ ಆಯಾ ತತ್ವಾಭಿಮಾನಿ ದೇವತೆಗಳನ್ನೂ ಅವರ ಅಂತರ್ಗತ ಇರುವ ಭಗವದ್ರೂಪಗಳನ್ನೂ ಚಿಂತಿಸುವ ಪರಿಪಾಠವಿದೆ. ಭೋಜನಾನಂತರದಲ್ಲಿ ಆಹಾರವನ್ನು ತಯಾರಿಸಲು ಉಪಯೋಗಿಸಿದ ಪಾತ್ರೆಗಳನ್ನೂ, ಸ್ಥಳವನ್ನೂ ಶುಚಿಗೊಳಿಸಲಾಗುತ್ತದೆ ಹಾಗೆ ಶುಚಿ ಮಾಡಿದ ಮೇಲೆಯೇ ಆ ಪಾತ್ರೆಗಳು ಮತ್ತು ಸ್ಥಳಗಳು ನಾಳಿನ ಆಹಾರ ತಯಾರಿಕೆಗೆ ಯೋಗ್ಯವೆನಿಸಿಕೊಳ್ಳುತ್ತವೆ. ಭೋಜನಕ್ಕೆ ಆಹಾರವನ್ನು ಉಪಯೋಗಿಸಿಯಾದ ಮೇಲೆ ಪಾತ್ರೆಗಳಿಗೆ ಅಂಟಿರುವ ಆಹಾರದ ತುಣುಕುಗಳಿಗೆ ಮುಸುರೆ ಎಂದು ಕರೆಯುತ್ತಾರೆ. ಆ ಮುಸುರೆಯನ್ನು ಹುಣಸೇಹಣ್ಣು ಮಣ್ಣು ಹಚ್ಚಿ ನಾರಿನಿಂದ ತಿಕ್ಕಿ ನೀರಿನಿಂದ ತೊಳೆದರೆ ಅದು ಶುದ್ಧವಾಗುತ್ತದೆ. ಹಾಗೆಯೇ ನಮ್ಮ ಮನಸೂ ಸಹ ಅನೇಕ ವಿಷಯಗಳಲ್ಲಿ ತನ್ನನ್ನು ತೊಡಗಿಸಿಕೊಂಡು, ಅನೇಕ ಶಾಸ್ತ್ರ ನಿಷಿದ್ಧ ವಿಚಾರಗಳನ್ನು ಮಾಡಿ, ತನ್ನನ್ನು ತೊಡಗಿಸಿಕೊಂಡು ಅಪವಿತ್ರವಾಗಿರುತ್ತದೆ. ಅದಕ್ಕೆ ದಾಸರು ಮನಸ್ಸಿನ ಮುಸುರೆ ಎಂದು ಸಂಬೋಧಿಸಿದ್ದಾರೆ. ಹೀಗೆ ಮುಸುರೆಗಟ್ಟಿ ಅಪವಿತ್ರವಾದ, ಮೈಲಿಗೆಯಾದ ಮನಸ್ಸನ್ನು ಪುನಃ ನಾವು ಶುದ್ಧಗೊಳಿಸಬೇಕು.

**ಮುಸುರೆ ತೊಳೆಯಬೇಕು । ಗುಸುಗುಸು ಬಿಡಬೇಕು ।**
**ಈಶಪ್ರೇರಣೆಯೆಂಬೊ । ಹಸಿಯ ಹುಲ್ಲನ್ನು ಹಾಕಿ ॥ ಅ. ॥**

ಪಾತ್ರೆಯ ಮುಸುರೆಯನ್ನು ತೊಳೆಯುವಾಗ ಹಸಿಯ ಹುಲ್ಲನ್ನು ತೆಗೆದುಕೊಂಡು ಅದಕ್ಕೆ ಹುಣಸೇಹಣ್ಣು ಮತ್ತು ಮಣ್ಣನ್ನು ಸೇರಿಸಿಕೊಂಡು ಉಜ್ಜಲಾಗುತ್ತದೆ. ಹಾಗೆಯೇ ಮನಸ್ಸಿಗೆ ಅಂಟಿದ ಮುಸುರೆಯನ್ನು ತೊಳೆಯಲಿಕ್ಕೆ ಈಶ ಪ್ರೇರಣೆಯೆಂಬ ಹಸಿಯ ಹುಲ್ಲನ್ನು ಉಪಯೋಗಿಸಬೇಕು. ನಾವು ನಮ್ಮ ಮನಸ್ಸನ್ನು ಯಾವ ರೀತಿಯಲ್ಲಿ ಇಟ್ಟುಕೊಳ್ಳಬೇಕು, ಅದು

ಹೇಗೆ ಪರಿಶುದ್ಧವಾಗಿರಬೇಕು ಎಂದು ನಮಗೆ ತಿಳಿಸಿಕೊಡಲು ಅನೇಕ ಮಾರ್ಗದರ್ಶಕರು ಇದ್ದಾರೆ. ತಂದೆ ತಾಯಿ ಗುರು ಹಿರಿಯರು ಹೀಗೆ ಅನೇಕ ಲೌಕಿಕ ಉದಾಹರಣೆಗಳು ನಮಗೆ ಸಿಗುತ್ತವೆ. ಎಲ್ಲಕ್ಕೂ ಮಿಗಿಲಾಗಿ ಶಾಸ್ತ್ರವು ನಮಗೆ ಹೇಗಿರಬೇಕು ಎಂದು ವಿವರಿಸುತ್ತದೆ. ಇವೆಲ್ಲವೂ ಈಶಪ್ರೇರಣೆಯೆಂಬ ಹಸಿಯ ಹುಲ್ಲು ಎಂದು ತಿಳಿದುಕೊಳ್ಳಬೇಕು. ಇದನ್ನು ಮನದಟ್ಟುಮಾಡಿಕೊಂಡರೆ ಸಂಶಯವಿರಲಾರದು. ಒಮ್ಮೆ ಸಂಶಯವಿಲ್ಲವೆಂದ ಮೇಲೆ ಗುಸುಗುಸು (ನಿರ್ಧಾರವಿಲ್ಲದ ಸಂಶಯದ ಮನ) ತಂತಾನೇ ನಿಂತು ಹೋಗುತ್ತದೆ.

**ಅಷ್ಟಮದದಿಂದ ಸುಟ್ಟ ಈ ಪಾತ್ರೆಯ ।**
**ವಿಷ್ಣು ನಾಮವೆಂಬೊ ಕೃಷ್ಣಾನದಿಯಲ್ಲಿ ॥ 1 ॥**

ಮನಸ್ಸೆಂಬ ಪಾತ್ರೆಯು ಅಷ್ಟಮದಗಳೆಂಬ ಬೆಂಕಿಯಿಂದ ಸುಟ್ಟು ಕರಕಲಾಗಿದೆ. ಹೀಗೆ ಸುಟ್ಟಿರುವ ಮನಸ್ಸೆಂಬ ಪಾತ್ರೆಯನ್ನು ವಿಷ್ಣುನಾಮವೆಂಬ ಕೃಷ್ಣಾನದಿಯಲ್ಲಿ ಮುಳುಗಿಸಬೇಕು. ಆ ನದಿಯ ನೀರಿಗೆ ಮನಸ್ಸಿಗೆ ಅಂಟಿರುವ ಅಷ್ಟಮದಗಳೆಂಬ ಮುಸುರಿಯು ತೋಯ್ದು ಬಿಟ್ಟು ಹೋಗುತ್ತದೆ. ಮನಸ್ಸೆಂಬ ಪಾತ್ರೆಯು ಅಲ್ಲೋಲಕಲ್ಲೋಲವಾದಾಗ ಅದು ಪುನಃ ಶಾಂತಸ್ಥಿತಿಗೆ ಬರುವಂತೆ ಮಾಡುವುದು ಶ್ರೀಹರಿಯ ನಾಮಸ್ಮರಣೆಯಿಂದ ಮಾತ್ರ. ಮನಸ್ಸು ಬೇಸರಗೊಂಡಾಗ ಸ್ವಲ್ಪ ಕಾಲ ಕಣ್ಣು ಮುಚ್ಚಿಕೊಂಡು ಕುಳಿತು ಇಷ್ಟ ದೈವದ ಧ್ಯಾನದಲ್ಲಿ ತೊಡಗಿದರೆ ಶಾಂತಿಯು ದೊರೆಯುತ್ತದೆ ಎನ್ನುವುದು ಅನುಭವಸಿದ್ದವು. ವಿಷ್ಣು ನಾಮಸ್ಮರಣೆಯು ನಿರಂತರವಾಗಿ ಹರಿಯುವ ಕೃಷ್ಣಾನದಿಯು.

**ಕಾಮ ಕ್ರೋಧದಿಂದ ಬೆಂದ ಈ ಪಾತ್ರೆಯ ।**
**ರಾಮಕೃಷ್ಣರೆಂಬೋ ಹೇಮಾ ನದಿಯಲ್ಲಿ ॥ 2 ॥**

ಕಾಮಕ್ರೋಧಾದಿ ಆರು ಮನಸ್ಸಿನ ವೈರಿಗಳಿಂದ ಮನಸ್ಸು ಸಂಪೂರ್ಣವಾಗಿ ಮುಸುರೆಯಾಗಿರುತ್ತದೆ. ಆ ಮುಸುರೆಯು ತೊಲಗಬೇಕಾದರೆ ಶ್ರೀರಾಮಕೃಷ್ಣ

ನಾಮಸ್ಮರಣೆಯೆಂಬ ಹೇಮಾನದಿಯಲ್ಲಿ ಮನಸ್ಸನ್ನು ಮುಳುಗಿಸಬೇಕು. ರಾಮಕೃಷ್ಣರೆಂಬೋ ಹೇಮಾನದಿಯಲ್ಲಿ ಮನಸ್ಸೆಂಬ ಮುಸುರೆಯಾದ ಪಾತ್ರೆಯನ್ನೂ ಮುಳುಗಿಸಿದಾಗ ಕಾಮಕ್ರೋಧಗಳೆಂಬ ಮುಸುರೆಯು ಮನಸ್ಸಿನಿಂದ ತೊಲಗಿಹೋಗುತ್ತದೆ. ಮನಸ್ಸು ಸ್ವಚ್ಛವಾಗುತ್ತದೆ.

**ವಿಷವೆಂಬೊ ಪಾತ್ರೆಯ ಮುಸುರೆಯ ತೊಳೆದಿಟ್ಟು ।**
**ಬಿಸಜಾಕ್ಷ ಪುರಂದರ ವಿಠಲನಿಗರ್ಪಿಸೊ ನಿತ್ಯ ॥ 3 ॥**

ಮನಸ್ಸಿಗೆ ಅಂಟಿದ ವಿವಿಧ ಮುಸುರೆಗಳನ್ನು ಆಯಾ ಸಮಯದಲ್ಲಿ ತೊಳೆಯದಿದ್ದರೆ ಅದು ಬೆಳೆದು ವಿಷವೆಂಬ ಘೋರವಾದ ಮುಸುರೆಯಾಗಿ ಸಂಪೂರ್ಣ ಮನಸ್ಸನ್ನು ಆವರಿಸಿಬಿಡುತ್ತದೆ. ಆದುದರಿಂದ ಕಾಲಕಾಲಕ್ಕೆ ಮನಸ್ಸಿಗೆ ಅಂಟಿದ ಮುಸುರೆಯನ್ನು ತೊಳೆಯಬೇಕು. ಹೀಗೆ ವಿಷವಾಗಿರುವ ಮುಸುರೆಯನ್ನು ಸದಾಕಾಲವೂ ತೊಳೆದು ಕಮಲಾಕ್ಷನಾದ (ಬಿಸಜಾಕ್ಷ) ಪುರಂದರ ವಿಠಲನಿಗೆ ನಿತ್ಯವೂ ಅರ್ಪಿಸಬೇಕು. ಯಾರು ತಮ್ಮ ಮನಸ್ಸನ್ನು ಶ್ರೀಹರಿಯ ಪಾದಕಮಲಗಳಲ್ಲಿ ಅರ್ಪಿಸುತ್ತಾರೆಯೋ ಅವರ ಮನಸ್ಸು ಮುಸುರೆಯಾಗುವುದೇ ಇಲ್ಲ. ಅವರ ಮನಸ್ಸೆಂಬ ಪಾತ್ರೆಯು ಪರಿಶುದ್ಧವಾಗಿಯೇ ಇರುತ್ತದೆ ಎಂಬ ತಾತ್ಪರ್ಯವು.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಪಂ॥ ಶ್ರೀ ಪರಶುರಾಂ ಬೆಟಗೇರಿ